# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**Center of Excellence for Farmer Producer Organization**

# ಕರುನಾಡ ಎಫ್.ಪಿ.ಒ ಸಮಾಚಾರ

ತ್ರೈಮಾಸಿಕ ಇ-ಸುದ್ದಿ ಪತ್ರಿಕೆ

ಸಂಚಿಕೆ 2 • ಏಪ್ರಿಲ್ 2022 www.coefpo.org






## ಕೇಂದ್ರ ವಲಯದ ಯೋಜನೆಯಡಿಯಲ್ಲಿ 10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನಕ್ಕಾಗಿ ರಾಷ್ಟ್ರೀಯ ಮಟ್ಟದ ಕಾರ್ಯಾಗಾರ

ಕ್ಲಸ್ಟರ್/ಗುಚ್ಛ ಆಧಾರಿತ ವ್ಯವಹಾರ ಸಂಸ್ಥೆಗಳ (ಸಿಬಿಬಿಒ) ಒಂದು ದಿನದ ರಾಷ್ಟ್ರೀಯ ಸಮ್ಮೇಳನವನ್ನು ಭಾರತ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಸಿ.ಸುಬ್ರಹ್ಮಣ್ಯಂ ಸಭಾಂಗಣ, ಎನ್ಎಸ್ಎಸಿ ಕಾಂಪ್ಲೆಕ್ಸ್, ಪೂಸಾ, ನವದೆಹಲಿಯಲ್ಲಿ ಆಯೋಜಿಸಲಾಗಿತ್ತು, ಈ ಕಾರ್ಯಾಗಾರದಲ್ಲಿ ಎಲ್ಲ 13 ಅನುಷ್ಠಾನ ಸಂಸ್ಥೆಗಳಿಂದ, ರಾಜ್ಯ ಸರ್ಕಾರದ ಅಧಿಕಾರಿಗಳು, ಎನ್‌ಪಿಎಮ್‌ಎ ತಂಡ ಮತ್ತು ಸಿಬಿಬಿಓಗಳಿಂದ ಸುಮಾರು 400 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಸಭೆಯು ದೀಪ ಬೆಳಗಿಸುವುದರೊಂದಿಗೆ ಪ್ರಾರಂಭವಾಗಿ ನಂತರ ಡಾ. ವಿಜಯಲಕ್ಷ್ಮಿ ಜಂಟಿ ಕಾರ್ಯದರ್ಶಿಗಳು, ಕೃಷಿ ಮತ್ತು ರೈತರ ಕಲ್ಯಾಣ, ಹೆಚ್ಚುವರಿ ಕಾರ್ಯದರ್ಶಿಗಳಾದ ಶ್ರೀ ಲಿಖಿ, ಶ್ರೀಮತಿ ನೀಲಕಮಲ ದರ್ಬಾರಿ, ವ್ಯವಸ್ಥಾಪಕ ನಿರ್ದೇಶಕರು, ಎಸ್‌ಎಫ್‌ಎಸಿ, ಡಾ.ಚಿಂತಾಲ, ಅಧ್ಯಕ್ಷರು, ನಬಾರ್ಡ್, ರಾಜ್ಯ ಸಚಿವರಾದ ಶ್ರೀ ಕೈಲಾಶ್ ಚೌಧರಿ ಮತ್ತು ಅಂತಿಮವಾಗಿ ಶ್ರೀ ನರೇಂದ್ರ ತೋಮರ್, ಸಚಿವರು ಕೃಷಿ ಮತ್ತು ರೈತರ ಕಲ್ಯಾಣ ಮಾತನಾಡಿ ಸಿಬಿಬಿಒ ಗಳಿಗೆ ಅತ್ಯಂತ ಮುಖ್ಯವಾದ ಜವಾಬ್ದಾರಿಗಳನ್ನು ನಿಯೋಜಿಸಲಾಗಿರುವುದರಿಂದ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಕರೆ ನೀಡಿದರು. ನಬಾರ್ಡ್ ಅಧ್ಯಕ್ಷರು ಮಾತನಾಡಿ, ಪ್ರತಿ ಸಿಬಿಬಿಒ ನಿಗದಿಪಡಿಸಲಾದ ಎಫ್‌ಪಿಓ ಗಳ ಸಂಖ್ಯೆಯ ಮಿತಿಯನ್ನು ಹೆಚ್ಚಿಸಲು ಸೂಚಿಸಿದರು. ಅನುಷ್ಠಾನ ಸಂಸ್ಥೆಗಳು ಅನುಭವ ಮತ್ತು ಕಲಿಕಾ ಆಧಾರಿತ ಕೋರ್ಸ್‌ಗಳನ್ನು ರೂಪಿಸಿ ಎಫ್‌ಪಿಓ ಮಟ್ಟದಲ್ಲಿ ಕಾರ್ಯಚರಣೆಯ ಮಾರ್ಗಸೂಚಿಗಳೊಂದಿಗೆ ತ್ವರಿತ ಗತಿಯಲ್ಲಿ ಕೆಲಸದ ಕಡೆ ಗಮನ ಹರಿಸಬೇಕು ಹಾಗೂ ದೇಶದಲ್ಲಿನ ಎಲ್ಲ ರೈತರನ್ನು ಎಫ್‌ಪಿಒಗಳ ಅಡಿಯಲ್ಲಿ ತರಲು ಸುಮಾರು ಎರಡು ಲಕ್ಷ ಎಫ್‌ಪಿಒ ಗಳನ್ನು ಉತ್ತೇಜಿಸುವ ದೀರ್ಘಾವಧಿಯ ಯೋಜನೆ ಅಗತ್ಯವನ್ನು ಅವರು ಸೂಚಿಸಿದರು.

## ಸಲಹಾ ಸಮಿತಿ

**ಶ್ರೀಮತಿ ವಂದಿತಾ ಶರ್ಮಾ**
ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು
ಆಭಿವೃದ್ಧಿ ಆಯುಕ್ತರು

**ಡಾ. ಕೆ. ಎಂ. ಇಂದಿರೇಶ್**
ಕುಲಪತಿಗಳು,
ತೋ.ವಿ.ವಿ, ಬಾಗಲಕೋಟೆ

**ಶ್ರೀ. ಶಿವಯೋಗಿ ಕಳಸದ**
ಕಾರ್ಯದರ್ಶಿಗಳು,
ಕೃಷಿ ಇಲಾಖೆ

**ಶ್ರೀ. ರಾಜೇಂದರ್ ಕುಮಾರ್ ಕಟಾರಿಯ**
ಪ್ರಧಾನ ಕಾರ್ಯದರ್ಶಿಗಳು,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಡಾ. ಎಂ. ಬಿ. ವೆಂಕಟೇಶ್**
ಆಯುಕ್ತರು,
ಜಲಾನಯನ ಅಭಿವೃದ್ಧಿ ಇಲಾಖೆ

**ಶ್ರೀ. ನಾಗೇಂದ್ರ ಪ್ರಸಾದ್**
ನಿರ್ದೇಶಕರು,
ತೋಟಗಾರಿಕೆ ಇಲಾಖೆ

## ಕರ್ನಾಟಕದಲ್ಲಿ ರೈತರ ಉತ್ಪನ್ನಗಳಿಗೆ ಇ-ಮಾರುಕಟ್ಟೆಯ ವಿಸ್ತರಣೆ

ಕರ್ನಾಟಕ ರಾಜ್ಯ ಸರ್ಕಾರವು ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ರಾಷ್ಟೀಯ ಇ-ಮಾರುಕಟ್ಟೆಯ (ReMS) ಆನ್‌ಲೈನ್ ವೇದಿಕೆಯ ಮುಖಾಂತರ ವ್ಯಾಪಾರ ಮತ್ತು ವಹಿವಾಟು ಮಾಡಲು ಮುಂಬರುವ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿಸ್ತರಿಸಲು ಆಸಕ್ತಿ ಹೊಂದಿದೆ. ರಾಷ್ಟೀಯ ಇ-ಮಾರುಕಟ್ಟೆಯ ವ್ಯಾಪಾರ ವೇದಿಕೆಯು ರೈತ ಉತ್ಪಾದಕ ಸಂಸ್ಥೆಗಳನ್ನು ಮಾರುಕಟ್ಟೆಗಳೊಂದಿಗೆ ಸಂಪರ್ಕ ಕಲ್ಪಿಸಿ ರೈತರು ದೊಡ್ಡ ಪ್ರಮಾಣದಲ್ಲಿ ಒಗ್ಗೂಡಿಸಿದ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸುತ್ತದೆ.

ಪ್ರಾರಂಭಿಕ ಹಂತದಲ್ಲಿ ರೈತ ಉತ್ಪಾದಕ ಸಂಸ್ಥೆಗಳ **1.41** ಕೋಟಿ ಮೌಲ್ಯದ **4,661 ಕ್ವಿಂಟಾಲ್** ಉತ್ಪನ್ನಗಳ **37** ಲಾಟ್‌ಗಳನ್ನು ಈ ವೇದಿಕೆಯ ಮೂಲಕ ವಹಿವಾಟು ಮಾಡಲಾಗಿದೆ ಎಂದು ReMSನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮನೋಜ ರಾಜನ್ ಹೇಳಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಮುಂಬರುವ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಶೀಘ್ರದಲ್ಲೇ ಸಭೆಯನ್ನು ಆಯೋಜಿಸುವುದಾಗಿ ತಿಳಿಸಿದರು.

ಪ್ರಸ್ತುತ ನಮ್ಮ ರಾಜ್ಯದಲ್ಲಿ 1000 ಕ್ಕೂ ಅಧಿಕ ರೈತ ಉತ್ಪಾದಕರ ಸಂಸ್ಥೆಗಳು ಸರಾಸರಿ 350-400 ಷೇರುದಾರರನ್ನು ಹೊಂದಿ ಕಾರ್ಯನಿರ್ವಹಿಸುತ್ತಿವೆ. ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಾದ ಶ್ರೀಮತಿ ವಂದಿತಾ ಶರ್ಮಾ, ನಬಾರ್ಡ್ ಆಯೋಜಿಸಿದ ರಾಜ್ಯ ಮಟ್ಟದ ಸಾಲ ಯೋಜನೆಗಳ ವಿಚಾರ ಸಂಕಿರಣದಲ್ಲಿ ಆದ ಚರ್ಚೆಯನ್ನು ಉಲ್ಲೇಖಿಸಿ, ಮುಂದಿನ ದಿನಗಳಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಕೃಷಿ ಆದಾಯವನ್ನು ಹೆಚ್ಚಿಸಲು ReMS ವೇದಿಕೆಯು ಒಂದು ಪರಿಪೂರ್ಣವಾದ ಮಾರ್ಗವಾಗಿ ಹೊರಹೊಮ್ಮಲಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಪ್ರಸ್ತುತ ಈ ವೇದಿಕೆಯ ಮೂಲಕ ಮಾರಾಟವಾದ 4,661 ಕ್ವಿಂಟಾಲ್‌ಗಳ ಉತ್ಪನ್ನವು ಅತೀ ಕಡಿಮೆ ಪ್ರಮಾಣದ್ದಾಗಿದ್ದು ಮುಂದಿನ ದಿನಗಳಲ್ಲಿ ಅತೀ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬಹುದಾಗಿದೆ ಎಂದು ಹೇಳಿದರು.

ನಮ್ಮ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯವು ಎ.ಪಿ.ಎಮ್.ಸಿ ಹರಾಜು ಪ್ರಕ್ರಿಯೆಯಲ್ಲಿ ReMS ವೇದಿಕೆಯನ್ನು ಅಳವಡಿಸಿದ ಪ್ರಥಮ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಶ್ರೀಮತಿ ಶರ್ಮಾರವರು ತಿಳಿಸಿದರು. ಶ್ರೀ. ಮನೋಜ ರಾಜನ್ ರವರು ರೈತ ಉತ್ಪಾದಕರ ಸಂಸ್ಥೆಗಳು ಮುಂಬರುವ ದಿನಗಳಲ್ಲಿ ಈ ವೇದಿಕೆಯನ್ನು ಉಪಯೋಗಿಸಿಕೊಂಡು ಕೃಷಿ ಉತ್ಪನ್ನಗಳಾದ ಶೇಂಗಾ, ಮುಸುಕಿನ ಜೋಳ, ಭತ್ತ, ತೊಗರಿ, ರಾಗಿ, ಬೆಲ್ಲ, ಕಡಲೆ, ಹೆಸರು, ಸೊಯಾಬೀನ್ ಇತ್ಯಾದಿಗಳನ್ನು ಮಾರಾಟ ಮಾಡಬಹುದಾಗಿದೆ ಎಂದು ತಿಳಿಸಿದರು. ಈ ಎಲೆಕ್ಟ್ರಾನಿಕ್ ವ್ಯಾಪಾರ ವೇದಿಕೆ ಗುಣಾತ್ಮಕ ಅಂಶಗಳಾದ ಪಾರದರ್ಶಕತೆ, ಸುರಕ್ಷತೆ ಮತ್ತು ಸಮಗ್ರ ವ್ಯಾಪಾರ ವೈಶಿಷ್ಟ್ಯಗಳನ್ನು ಹೊಂದಿರತ್ತದೆ ಎಂದು ವಿವರಿಸಿದರು. ರೈತ ಉತ್ಪಾದಕ ಸಂಸ್ಥೆಗಳು ಈ ವೇದಿಕೆಯ ಮೂಲಕ ಮಾರಾಟ ಮಾಡುವಾಗ ತಮ್ಮಲ್ಲಿ ಲಭ್ಯವಿರುವ ಉತ್ಪನ್ನಗಳನ್ನು ತಾವಿರುವ ಸ್ಥಳದಿಂದ ವಿವರಗಳನ್ನು ಕಳಿಸುವುದರ ಮೂಲಕ ವ್ಯಾಪಾರ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ವರ್ತಕರು ಆನ್‌ಲೈನ್ ಮೂಲಕ ಎಫ್.ಪಿ.ಒ ಗಳ ಉತ್ಪನ್ನಗಳನ್ನು ಪರಿಶೀಲಿಸಿ ಬಿಡ್‌ಗಳ ಮೂಲಕ ದರಗಳನ್ನು ನಿಗದಿಪಡಿಸಿ ವ್ಯಾಪಾರ ಪ್ರಕ್ರಿಯೆಯನ್ನು ಖಚಿತಪಡಿಸಿಕೊಂಡು ಈ ವೇದಿಕೆಯ ಮೂಲಕ ಆನ್‌ಲೈನ್‌ನಲ್ಲಿ ಎಫ್.ಪಿ.ಒ/ರೈತರ ಬ್ಯಾಂಕ್ ಖಾತೆಗಳಿಗೆ ಪಾವತಿ ಮಾಡುತ್ತಾರೆ. ಈ ವೇದಿಕೆಯು ರಾಜ್ಯದ 160 ಮಾರುಕಟ್ಟೆಗಳು ಮತ್ತು 44,000 ವ್ಯಾಪಾರಿಗಳೊಂದಿಗೆ ಸಂಪರ್ಕ ಹೊಂದಿದ್ದು ಎಫ್.ಪಿ.ಒ ಗಳು ತಮ್ಮ ಉತ್ಪನ್ನಗಳಿಗೆ ಪಾರದರ್ಶಕ ರೀತಿಯಲ್ಲಿ ನ್ಯಾಯಸಮ್ಮತವಾದ ಬೆಲೆಯನ್ನು ಪಡೆದು ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.



# ಪ್ರಚಲಿತ ಎಫ್.ಪಿ.ಓ ಸುದ್ದಿಗಳು

## ರಾಜ್ಯದಲ್ಲಿ ವರಾಹ ಅಭಿವೃದ್ಧಿಗೆ ವರವಾದ ಹಂದಿ ರೈತ ಉತ್ಪಾದಕ ಸಂಸ್ಥೆ

ಕರ್ನಾಟಕ ರಾಜ್ಯದಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು, ಆರ್‌ಕೆವಿವೈ ಯೋಜನೆ ಅಡಿಯಲ್ಲಿ ಬೆಂಗಳೂರು, ಮಂಗಳೂರು, ಉಡುಪಿ ಮತ್ತು ಮಡಿಕೇರಿಯಲ್ಲಿ ಹಾಗೂ ಜಲಾನಯನ ಅಭಿವೃದ್ಧಿ ಇಲಾಖೆ ಅಡಿಯಲ್ಲಿ 5 ಅಮೃತ್ ಹಂದಿ ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನಾ ಗುರಿಯನ್ನು ಹೊಂದಿದ್ದು ಹಾಸನ, ಚಿಕ್ಕಮಗಳೂರು, ಮಂಡ್ಯ, ಧಾರವಾಡ ಬೆಳಗಾವಿ, ತುಮಕೂರು ಮತ್ತು ಮೈಸೂರು (ನೋಂದಣಿ ಕಾರ್ಯ ಪ್ರಗತಿಯಲ್ಲಿದೆ) ಗಳಲ್ಲಿ ಹಂದಿ ರೈತ ಉತ್ಪಾದಕ ಸಂಸ್ಥೆಗಳ 2021–22 ನೇ ಸಾಲಿನಲ್ಲಿ ಸ್ಥಾಪಿಸಲಾಗಿದೆ.

ಬೆಂಗಳೂರಿನಲ್ಲಿ ಸ್ಥಾಪಿಸಿರುವ ಸಿಲಿಕಾನ್‌ಸಿಟಿ ಹಂದಿ ರೈತ ಉತ್ಪಾದಕ ಸಂಸ್ಥೆಯು ಮೂಂಚೂಣಿಯಲ್ಲಿದ್ದು ಹಂದಿ ಸಾಕಾಣಿಕೆಯನ್ನೇ ಪ್ರಮುಖ ಕಸುಬನ್ನಾಗಿ ನಡೆಸಿಕೊಂಡು ಬಂದಿರುವ, ಹೊಸದಾಗಿ ಹಂದಿ ಸಾಕಾಣಿಕೆಯನ್ನು ಪ್ರಾರಂಭ ಮಾಡಿರುವ ಯುವಕ ಯುವತಿಯರಿಗೆ ವರವಾಗಿ ನಿಂತಿದ್ದು ರೈತ ಉತ್ಪಾದಕ ಸಂಸ್ಥೆಯ ಹಂದಿ ಸಾಕಾಣಿಕಾ ರೈತರು ಯಾವುದೇ ಆರ್ಥಿಕ ನಷ್ಟ ಹೊಂದದೆ ಉತ್ಪಾದನೆಗೊಂಡ ಎಲ್ಲ ಜೀವಂತ ಹಂದಿಗಳನ್ನು ಬೆಂಗಳೂರಿನಿಂದ ನಾಗಾಲ್ಯಾಂಡ, ದಿಮಾಪು ಮತ್ತು ಉತ್ತರ ಈಶಾನ್ಯ ರಾಜ್ಯದ ಮಾರುಕಟ್ಟೆಗಳಿಗೆ ಮಾರಾಟ ಮಾಡಿ ಹೆಚ್ಚಿನ ಲಾಭಗಳಿಸುವಲ್ಲಿ ಪ್ರಮುಖ ಪಾತ್ರ ಹೊಂದಿದೆ.

ಉತ್ಪಾದಕ ಸಂಸ್ಥೆ ವತಿಯಿಂದ ರೈತರಿಗೆ ಹಂದಿ ಸಾಕಾಣಿಕೆ ಮಾಡಲು ಉತ್ಕೃಷ್ಟವಾದ ಮಾರುಕಟ್ಟೆ ಬೆಲೆಗಿಂತ 20% ಕಡಿಮೆ ದರದಲ್ಲಿ ಹಂದಿ ಆಹಾರವನ್ನು ನೀಡಲಾಗುತ್ತದೆ. ಇದಲ್ಲದೆ ಲಸಿಕೆ ಸರಬರಾಜು, ಹಂದಿ ಸಾಕಾಣಿಕೆಯಲ್ಲಿ ಉಪಯೋಗಕ್ಕೆ ಬರುವ ಸಲಕರಣೆಗಳಾದ ಟೀತ್ ಕಟರ್, ಆಟೋಮ್ಯಾಟಿಕ್ ಸಿರಿಂಜ್, ಟಾರಪಲೀನ್, ಕಿವಿ ಓಲೆಗಳು, ಖನಿಜ ಮಿಶ್ರಣ ಪುಡಿ ಹಾಗೂ ಆಹಾರ ಪೂರಕಗಳನ್ನು ಕಂಪನಿಗಳಿಂದ ಖರೀದಿಸಿ ರಿಯಾಯತಿ ದರದಲ್ಲಿ ರೈತರಿಗೆ ಒದಗಿಸಲಾಗುತ್ತದೆ. ಸಕ್ಕರೆ ನಾಡು ಹಂದಿ ಉತ್ಪಾದಕರ ಸಂಸ್ಥೆ ಮಂಡ್ಯದಲ್ಲಿ ಪ್ರಾರಂಭ ಮಾಡಿದ ದಿನದಿಂದಲೇ 75 ಟನ್ ಜೀವಂತ ಹಂದಿಗಳನ್ನು ಮತ್ತು ಹಾಸನ, ಚಿಕ್ಕಮಗಳೂರು ಅಮೃತ ಹಂದಿ ರೈತ ಉತ್ಪಾದಕ ಸಂಸ್ಥೆವತಿಯಿಂದ ಪ್ರಾರಂಭ ಮಾಡಿದ ತಿಂಗಳಲ್ಲೇ ಜೀವಂತ ಹಂದಿಗಳನ್ನು ನಾಗಾಲ್ಯಾಂಡ್‌ಗೆ ಕಳುಹಿಸಿಕೊಡಲಾಗಿದೆ ಹಾಗೆ ಮಾರಾಟ ಮಾಡಿದ ಪ್ರತಿ ಕೆ.ಜಿ ಹಂದಿಗೆ ರೂ.1 ರಂತೆ ರೈತ ಉತ್ಪಾದಕ ಸಂಸ್ಥೆ ವ್ಯವಹಾರ ವೆಚ್ಚಕ್ಕಾಗಿ ಹಂದಿ ಕೊಳ್ಳುವ ಸಗಟು ಮಾರಾಟಗಾರರಿಂದ ಪಡೆಯಲಾಗಿದೆ.



ಮುಂಬರುವ ದಿನಗಳಲ್ಲಿ ಬೇರೆ ಜಿಲ್ಲೆಗಳಲ್ಲೂ ಕೂಡಾ ಹಂದಿ ಉತ್ಪಾದಕ ಸಂಸ್ಥೆಗಳನ್ನು ಸ್ಥಾಪಿಸಲು ಬೇಡಿಕೆ ಬಂದಿದ್ದು ವರಾಹ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಬದ್ಧವಾಗಿರುತ್ತದೆ.

## ಸ್ವದೇಶಿ ಮೇಳದಲ್ಲಿ ಪಾಲ್ಗೊಂಡ ಬಿಲ್ಲಿನಕೋಟೆಯ ಅನ್ನಬ್ರಹ್ಮ ರೈತ ಉತ್ಪಾದಕ ಕಂಪನಿ

ಅನ್ನಬ್ರಹ್ಮ ರೈತ ಉತ್ಪಾದಕ ಕಂಪನಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಬಿಲ್ಲಿನಕೋಟೆಯಲ್ಲಿ ಕರ್ನಾಟಕ ಸರ್ಕಾರದ ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ ಹಾಗೂ ಸಂಪನ್ಮೂಲ ಸಂಸ್ಥೆಯಾದ ಐ.ಎಫ್.ಹೆಚ್.ಡಿ ಸಂಸ್ಥೆ ರವರ ಸಹಯೋಗದಲ್ಲಿ ದಿನಾಂಕ 17.12.2020 ರಂದು ಸ್ಥಾಪನೆಯಾಗಿರುತ್ತದೆ. ಸದರಿ ಕಂಪನಿಯು ಸುತ್ತಮುತ್ತಲಿನ ಗ್ರಾಮಗಳ ರೈತರನ್ನು ಒಳಗೊಂಡು, ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ 750 ಷೇರು ಸದಸ್ಯರುಗಳನ್ನು ಒಳಗೊಂಡಿದ್ದು ರೈತರಿಗೆ ಸೂಕ್ತ ಸಮಯದಲ್ಲಿ ಕೃಷಿ ಪರಿಕರಗಳನ್ನು ಒದಗಿಸಿಕೊಡುತ್ತಿದೆ. ರೈತರು ಬೆಳೆದ ಕೊಬ್ಬರಿ, ಶೇಂಗಾ, ಎಳ್ಳು, ಹರಳು ಬೀಜಗಳಿಂದ ಗಾಣದ ಮೂಲಕ ಶುದ್ಧವಾದ ಎಣ್ಣೆಯನ್ನು ತೆಗೆದು ಮಾರಾಟ ಮಾಡಲಾಗುತ್ತಿದೆ ಹಾಗೂ ರೈತರುಬೆಳೆದ ಸಿರಿಧಾನ್ಯಗಳನ್ನು ಅನ್ನಬ್ರಹ್ಮ ಕಂಪನಿಯ ಮುದ್ರೆ ಹಾಗೂ ಎಫ್ ಎಸ್ ಎಸ್ ಎಐ ಪರವಾನಿಗೆ ಯೊಂದಿಗೆ ಮಾರಾಟ ಮಾಡಲಾಗುತ್ತಿದೆ.



ದಿನಾಂಕ 06.04.2022 ರಿಂದ 10.04.2022 ರವರೆಗೆ ಜಯನಗರ ಚಂದ್ರಗುಪ್ತ ಮೌರ್ಯ (ಶಾಲಿನಿ) ಮೈದಾನದಲ್ಲಿ 5 ದಿನಗಳವರೆಗೆ ಆಯೋಜಿಸಲಾಗಿದ್ದ ಸ್ವದೇಶಿ ಮೇಳದಲ್ಲಿ ಅನ್ನಬ್ರಹ್ಮ ರೈತ ಉತ್ಪಾದಕ ಕಂಪನಿ ಭಾಗವಹಿಸಿ ಕಂಪನಿಯ ಬಗ್ಗೆ ಜನರಿಗೆ ಅರಿವು ಮೂಡಿಸಲಾಯಿತು, ಒಟ್ಟು ರೂ.20,180 ಗಳ ವ್ಯಾಪಾರ ವಹಿವಾಟು ಮಾಡಲಾಯಿತು. ಈ ಸ್ವದೇಶಿ ಮೇಳದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಬಸವರಾಜ್ ಬೊಮ್ಮಾಯಿ**ರವರು, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ **ಶ್ರೀಯುತ ಸಿ.ಟಿ. ರವಿ**ರವರು ಹಾಗೂ ಕಂದಾಯ ಇಲಾಖೆಯ ಮಂತ್ರಿಗಳಾದ **ಶ್ರೀ ಆರ್. ಆಶೋಕ್**ರವರು ಕಂಪನಿಯ ಸ್ಟಾಲ್‌ಗೆ ಭೇಟಿ ನೀಡಿ ಕಂಪನಿಯ ಪ್ರಗತಿಯ ಬಗ್ಗೆ ವಿಚಾರಿಸಿದರು.

## ಫ್ಲಿಪ್‌ಕಾರ್ಟ್ ಕಂಪನಿಯ ಜೊತೆ ಕೃಷಿಕ ರೈತ ಉತ್ಪಾದಕ ಕಂಪನಿಯ ಒಪ್ಪಂದ

ಕೃಷಿಕ ರೈತ ಉತ್ಪಾದಕ ಕಂಪನಿ ನಿಯಮಿತ, ಲಿಂಗಸಗೂರು ತಾಲೂಕಿನ ನಾಗಲಾಪುರ ಗ್ರಾಮದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ ಹಾಗೂ ಗ್ರಾಮ್ಸ್ ಸಂಪನ್ಮೂಲ ಸಂಸ್ಥೆಯ ಸಹಯೋಗದಲ್ಲಿ ದಿನಾಂಕ 06.02.2021 ರಂದು ಸ್ಥಾಪನೆಯಾಗಿರುತ್ತದೆ. ಒಟ್ಟು 819 ಷೇರು ಸದಸ್ಯರನೊಳಗೊಂಡಿದ್ದು, ಕೃಷಿ ಚಟುವಟಿಕೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತೆದೆ, ಷೇರುದಾರ ರೈತರುತ್ಪನ್ನಗಳಾದ ತೊಗರಿ, ಜೋಳ ಮತ್ತು ಸಜ್ಜಿ ಬೆಳೆಗಳ ಉತ್ತಮ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುತ್ತದೆ.

ಕೃಷಿಕ ರೈತ ಉತ್ಪಾದಕ ಕಂಪನಿ 2021–22 ನೇ ಸಾಲಿನ ವ್ಯಾಪಾರದಲ್ಲಿ ರೂ 60,000 ಗಳಷ್ಟು ಲಾಭವನ್ನು ಗಳಿಸಿದ್ದು ಎಸ್‌ಎಮ್‌ಎಎಮ್ ಯೋಜನೆಯಡಿಯಲ್ಲಿ ಕೃಷಿ ಯಂತ್ರೋಪಕರಣಗಳನ್ನು ಪಡೆದಿದ್ದು ಇದರಿಂದ ರೈತರಿಗೆ ಅನೇಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಈ ಕಂಪನಿಗೆ ಮಣ್ಣು ಪರೀಕ್ಷೆ ಕೇಂದ್ರ ಬಂದಿದ್ದು ಇದರಿಂದ ಆಗುವ ಲಾಭಗಳನ್ನು ರೈತರಿಗೆ ತಿಳಿಸಿ ಇದನ್ನು ಸದುಪಯೋಗ ಪಡೆದುಕೊಳ್ಳಬೇಕೆಂದು ಮಾಹಿತಿ ಕೊಡಲಾಯಿತು ಮತ್ತು ಮಣ್ಣು ಪರಿಕ್ಷೆ ಮಾಡಿಸುವುದು ಕಡ್ಡಾಯ ಎಂದು ತಮ್ಮ ಷೇರು ಸದಸ್ಯರಿಗೆ ತಿಳಿಸಲಾಯಿತು.

ದಿನಾಂಕ 27.03.2022ರಂದು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘ (ರಿ), ಕಲಬುರಗಿ ಹಾಗೂ ಗ್ರಾಮ್ಸ್ ಸಂಸ್ಥೆಯ ಸಹಯೋಗದಲ್ಲಿ ಸ್ವ-ಸಹಾಯ ಗುಂಪು/ರೈತ ಉತ್ಪಾದಕರ

# ಪ್ರಚಲಿತ ಎಫ್.ಪಿ.ಒ ಸುದ್ದಿಗಳು

ಸಂಸ್ಥೆಗಳಿಗೆ ಕಿರು ಯಂತ್ರಗಳನ್ನು ಒದಗಿಸುವ ಯೋಜನೆಯಡಿಯಲ್ಲಿ ಕೃಷಿಕ ರೈತ ಉತ್ಪಾದಕರ ಕಂಪನಿಗೆ ಪಲ್ವರೈಜರ್ 7.5 ಹೆಚ್.ಪಿ ಯಂತ್ರವನ್ನು ಶೇಕಡಾ 70ರಷ್ಟು ಸಬ್ಸಿಡಿ ಮೂಲಕ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶಿವಪ್ಪ ಇವರಿಗೆ ಹಸ್ತಾಂತರಿಸಲಾಯಿತು. ಸದರಿ ಸಮಯದಲ್ಲಿ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘ (ರಿ), ಕಲಬುರಗಿ ಕೃಷಿ ಘಟಕದ ನಿರ್ದೇಶಕರಾದ ಶ್ರೀಮತಿ ಮಂಜುಳಾ ಡೊಳ್ಳಿ, ನಿರ್ದೇಶಕರಾದ ಈರೇಶ್, ಇಲ್ಲೂರು, ಗ್ರಾಮ್ಸ್ ಸಂಸ್ಥೆಯ ಅಧ್ಯಕ್ಷರಾದ ಸೂಗುರಯ್ಯಸ್ವಾಮಿ, ಸಿ.ಇ.ಒ ಆದ ಮಹೇಶ್‌ಕುಮಾರ್ ಹಾಗೂ ಸಿಬ್ಬಂದಿಗಳು ಹಾಜರಿದ್ದರು.



ಕೃಷಿಕ ರೈತ ಉತ್ಪಾದಕ ಕಂಪನಿ ಕಳೆದ ಒಂದು ವರ್ಷದಿಂದ ಪರಿಕರ ವ್ಯಾಪಾರ ಮಾಡಲು ಪ್ರಾರಂಭಿಸಿದ್ದು, ಒಟ್ಟಾರೆಯಾಗಿ ಕ್ರಿಮಿನಾಶಕ ಮಾರಾಟದಿಂದ ಸುಮಾರು ರೂ.57,000 ಲಾಭವಾಗಿದೆ. ಕೃಷಿಕ ರೈತ ಉತ್ಪಾದಕ ಕಂಪನಿ ಈ ವರ್ಷದಲ್ಲಿ **ಫ್ಲಿಪ್‌ಕಾರ್ಟ್ ಕಂಪನಿಯವರ** ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

## ಮಹಿಳಾ ರೈತ ಸದಸ್ಯರಿಂದ ಕೂಡಿದ ರೈತ ಉತ್ಪಾದಕ ಸಂಸ್ಥೆಯಿಂದ ಒಂದು ನೇರ ಮಾರುಕಟ್ಟೆಯ ಅನ್ವೇಷಣೆ

ಕಾಪು ರೈತ ಉತ್ಪಾದಕ ಸಂಸ್ಥೆಯು 5ನೇ ಜುಲೈ 2021 ರಂದು ನಿಟ್ಟೆ ಎಜುಕೇಶನ್ ಸೊಸೈಟಿ ಅವರ ಮಾರ್ಗದರ್ಶನದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಪ್ರೋತ್ಸಾಹಗೊಂಡು ಸ್ಥಾಪನೆಯಾಗಿದೆ. ಇದು ಮಹಿಳಾ ಸದಸ್ಯರಿಂದ ಕೂಡಿದ್ದು ಅತೀ ಕಡಿಮೆ ಸಮಯದಲ್ಲಿ ಅತೀ ಹೆಚ್ಚು ಷೇರುದಾರರನ್ನು ಒಗ್ಗೂಡಿಸಿದೆ. ಸುಮಾರು 900 ಮಹಿಳಾ ಷೇರುದಾರರಿದ್ದು 18 ಲಕ್ಷ ರೂ ಷೇರು ಮೊತ್ತವನ್ನು ಸಂಗ್ರಹಿಸಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಬಹುಪಾಲು ಷೇರುದಾರರು ಉಡುಪಿ ಮಲ್ಲಿಗೆ ಬೆಳೆಯುತ್ತಿದ್ದಾರೆ ಈ ಬೆಳೆಗೆ ಮಾರುಕಟ್ಟೆಯಲ್ಲಿ ಬಹಳ ಬೇಡಿಕೆ ಇದ್ದು ಇಲ್ಲಿನ ಸದಸ್ಯರು ತಾವು ಬೆಳೆದ ಮಲ್ಲಿಗೆಯನ್ನು ಕಟ್ಟೆ ಎನ್ನುವ ಸಾಂಪ್ರದಾಯಕ ಮಾರುಕಟ್ಟೆ ಮೂಲಕ ಮಾರಾಟ ಮಾಡುತ್ತಾರೆ. ಮುಂದುವರೆದು ತಾವು ಬೆಳೆದ ಸಾವಯವ ತರಕಾರಿಗಳಾದ ಬದನೆ, ಬಿಳಿ ಬೆಂಡೆ, ತೊಂಡೆ, ಪಾಲಕ್ ಇತ್ಯಾದಿಗಳನ್ನು ಹತ್ತಿರದ ನಗರ ಪ್ರದೇಶವಾದ ಶಂಕರಪುರದ ಅಪಾರ್ಟ್‌ಮೆಂಟ್‌ಗಳಿಗೆ ನೇರ ಮಾರಾಟ ಮಾಡುವುದರ ಮೂಲಕ ಆದಾಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.



## ಶ್ರೀ ಸೂಗುರೇಶ್ವರ ರೈತ ಉತ್ಪಾದಕರ ಕಂಪನಿಯ ವತಿಯಿಂದ ಪ್ರಮುಖ ರೈತರಿಗೆ ತರಬೇತಿ

ದಿನಾಂಕ 06.04.2022ರಂದು ಮಸ್ಕಿ ತಾಲೂಕಿನ ಲಕ್ಷ್ಮೀ ಕ್ಯಾಂಪಿನಲ್ಲಿ ಶ್ರೀ ಸೂಗುರೇಶ್ವರ ರೈತ ಉತ್ಪಾದಕರ ಕಂಪನಿಯ ಮುಖಾಂತರ ಪ್ರಮುಖ ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ಅಧಿಕಾರಿಗಳಾದ ಶಿವದತ್ತ, ತೋಟಗಾರಿಕೆ ಅಧಿಕಾರಿಗಳಾದ ಶ್ರೀ ನಿರುಪಾದಿ, ಕಂಪನಿಯ ವ್ಯವಸ್ಥಾಕರ ನಿರ್ದೇಶಕರಾದ ಮಹೇಶ್ ಮತ್ತು ಕಂಪನಿಯ ಸಿ.ಇ.ಒ ಆದ ಮೋಸಿನ್ ಖಾನ್ ಹಾಗೂ ಕಂಪನಿಯ ನಿರ್ದೇಶಕರು, ಸುತ್ತಮುತ್ತಲಿನ ಗ್ರಾಮದ ಪ್ರಮುಖ ರೈತರುಗಳು ಹಾಜರಿದ್ದರು. ಸದರಿ ತರಬೇತಿಯಲ್ಲಿ ಕೃಷಿ ಅಧಿಕಾರಿಯಾದ ಶ್ರೀ ಶಿವದತ್ತ ಅವರು ಮಾತನಾಡುತ್ತಾ, ಮುಂದಿನ ದಿನಗಳಲ್ಲಿ ಉಜ್ವಲವಾದ ಮತ್ತು ಸಮರ್ಥನಿಯವಾದ ಸೇವೆ ಸಲ್ಲಿಸುವಂತಹ ಕೃಷಿ ಮತ್ತು ಕೃಷಿಯೇತರ ಕ್ಷೇತ್ರ ನಿರ್ಮಾಣಕ್ಕಾಗಿ ಪ್ರತಿ ರೈತರು ತಮ್ಮ ಮಾಲೀಕತ್ವದ ರೈತ ಉತ್ಪಾದಕರ ಸಂಸ್ಥೆಗಳನ್ನು ಉತ್ತೇಜಿಸುವ ಮೂಲಕ ರೈತರ ಏಳ್ಗೆಗೆ ಬೆಂಬಲವನ್ನು ಕೊಡಬೇಕು ಎಂದು ತಿಳಿಸಿದರು.



ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮಹೇಶ್ ಅವರು ಮಾತನಾಡಿ, ರೈತ ಉತ್ಪಾದಕರ ಕಂಪನಿಯ ಮೂಲಕ ಈಗಾಗಲೇ ಹಲವಾರು ಸೇವೆಗಳನ್ನು ಸುತ್ತಮುತ್ತಲಿನ ರೈತರಿಗೆ ಸೇವೆಗಳನ್ನು ಕೊಡುವುದರ ಜೊತೆಗೆ ತಾಂತ್ರಿಕ ತರಬೇತಿ ಮತ್ತು ಸಿಬ್ಬಂದಿಗಳ ಮೂಲಕ ರೈತರಿಗೆ ಬೆಳೆಗಳ ಬಗ್ಗೆ ತಿಳಿಸುವ ಕಾರ್ಯವನ್ನು ಮಾಡುತ್ತಿದೆ. ಅದಲ್ಲದೆ, ಇನ್ನೂ ಹೆಚ್ಚಿನ ರೀತಿಯಲ್ಲಿ ರೈತರಿಗೆ ಪರಿಣಾಮಕಾರಿಯಾದ ಕಡಿಮೆ ವೆಚ್ಚದ ಮತ್ತು ಸಂಪನ್ಮೂಲದ ಸಮರ್ಪಕ ಬಳಕೆ ಮಾಡಿಕೊಳ್ಳಲು ರೈತರನ್ನು ಸಕ್ರೀಯರನ್ನಾಗಿಸುವ ಸಂಸ್ಥೆಗಳನ್ನಾಗಿ ಬೆಳೆಸುವುದು, ರೈತರ ಆದಾಯವನ್ನು ಹೆಚ್ಚಿಸುವುದು ಮತ್ತು ಅವರ ಕೃಷಿ ಆಧಾರಿತ ಬದುಕನ್ನು ಸುಸ್ಥಿರಗೊಳಿಸುವುದು ರೈತ ಉತ್ಪಾದಕರ ಕಂಪನಿಯ ಮುಖ್ಯ ಧ್ಯೇಯವಾಗಿದೆ ಎಂದು ತಿಳಿಸಿದರು.

## ವ್ಯಾಪಾರ ಅಭಿವೃದ್ಧಿಯತ್ತ ಕೃಷಿಋಷಿ ರೈತ ಉತ್ಪಾದಕ ಕಂಪನಿ ಲಿಮಿಟೆಡ್

ಕೃಷಿಋಷಿ ರೈತ ಉತ್ಪಾದಕ ಕಂಪನಿಯು ದಿನಾಂಕ 29.08.2020 ರಲ್ಲಿ ನೊಂದಣಿ ಮಾಡಲಾಗಿದ್ದು, ಇಲ್ಲಿಯವರೆಗೂ 1,004 ರೈತರು ಷೇರು ಸದಸ್ಯರಾಗಿದ್ದಾರೆ. ನಮ್ಮ ಕಂಪನಿಗೆ ಕೃಷಿ ಇಲಾಖೆಯಿಂದ ಫೆಬ್ರವರಿ 2021 ರಲ್ಲಿ ಕೃಷಿ ವಿಲೇಜ್ ಮಿಷನರಿ ಬ್ಯಾಂಕ್‌ನಿಂದ ಟ್ರಾಕ್ಟರ್ ಮತ್ತು ಇತರೆ ಕೃಷಿ ಬಿಡಿ ಭಾಗಗಳು ವಿತರಣೆ ಮಾಡಿದ್ದು ಕಂಪನಿಗೆ ಹೆಮ್ಮೆಯ ವಿಷಯವಾಗಿದೆ. ರೈತರಿಗೆ ಮೊದಲು ಎಫ್‌ಪಿಒ ಬಗ್ಗೆ ಆಸಕ್ತಿ ಇರಲಿಲ್ಲ. ಆದರೆ ಯಂತ್ರೋಪಕರಣಗಳು ಬಂದ ಮೇಲೆ ಎಲ್ಲಾ ರೈತರು ಆಕರ್ಷಿತರಾಗಿದ್ದು, ಈ ಕೃಷಿ ಯಂತ್ರೋಪಕರಣಗಳಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತುಂಬಾ ಅನೂಕೂಲವಾಗಿದೆ, ಕಂಪನಿ ವತಿಯಿಂದ ಕಡಿಮೆ ದರದಲ್ಲಿ ರೈತರ ಹೊಲಗಳಿಗೆ ಕಳಿಸಲಾಗುತ್ತಿದೆ, ಇದರಿಂದ 500 ಜನರು ಇದರ ಸದುಪಯೋಗ ಪಡೆದುಕೊಂಡಿದ್ದಾರೆ, ಅಷ್ಟೆ ಅಲ್ಲದೆ ರೈತರಲ್ಲಿ ಕಂಪನಿಯ ಸೌಲಭ್ಯಗಳ ಕುರಿತು ಮಾಹಿತಿ ಪಡೆದುಕೊಂಡು ಹೆಚ್ಚು ಹೆಚ್ಚು ಜನರು ಷೇರುದಾರರಾಗಲು ಮುಂದೆ ಬರುತ್ತಿದ್ದಾರೆ. ಒಟ್ಟಿನಲ್ಲಿ ರೈತರ ಸಮಸ್ಯೆಗಳಿಗೆ ಬೆಂಬಲವಾಗಿ ಕೃಷಿಋಷಿ ರೈತ ಉತ್ಪಾದಕ ಕಂಪನಿಯು ನಿಂತಿದೆ. ಕೃಷಿಋಷಿ ರೈತ ಉತ್ಪಾದಕ ಕಂಪನಿ ಕಳೆದ ಒಂದು ವರ್ಷದಿಂದ ಪರಿಕರ ವ್ಯಾಪಾರ

# ಪ್ರಚಲಿತ ಎಫ್.ಪಿ.ಒ ಸುದ್ದಿಗಳು

ಮಾಡಲು ಪ್ರಾರಂಭಿಸಿದೆ, ಒಟ್ಟಾರೆಯಾಗಿ ಕ್ರಿಮಿನಾಶಕ ಮಾರಾಟದಿಂದ ಸುಮಾರು ರೂ.60,000 ಲಾಭವಾಗಿದೆ.

ಇಲಾಖೆಯಿಂದ ಜೂನ್ ತಿಂಗಳಲ್ಲಿ ಸುಮಾರು 500 ಜನ ಷೇರು ಸದಸ್ಯ ರೈತರಿಗೆ ಸುಧಾರಿಸಿದ ತೊಗರಿ ಬೀಜ ಉಚಿತವಾಗಿ ವಿತರಣೆ ಮಾಡಲಾಗಿದ್ದು, ಇದರಿಂದ ಕಂಪನಿ ಅಭಿವೃದ್ಧಿಗೆ ಬಹಳ ಸಹಾಯಕಾರಿಯಾಗಿದೆ. ಕೃಷಿಋಷಿ ರೈತ ಉತ್ಪಾದಕ ಕಂಪನಿ ಚಿಕ್ಕಹೆಸರೂರು ಈ ವರ್ಷದಲ್ಲಿ ಫ್ಲಿಪ್‌ಕಾರ್ಟ್ ಕಂಪನಿಯವರ ಜೊತೆ ಒಪ್ಪಂದ ಮಾಡಿಕೊಂಡಿದೆ. ಕಂಪನಿ ವತಿಯಿಂದ ಸದಸ್ಯ ರೈತರಿಂದ ತೊಗರಿ ಬೀಜ ಖರೀದಿ ಮಾಡಿಕೊಂಡು ಹತ್ತಿರದ ಎಪಿಎಂಸಿ ಮೂಲಕ ಮಾರಾಟ ಮಾಡಿಸಲಾಯಿತು, ಇದರಿಂದ 3 ತಿಂಗಳಲ್ಲಿ ಸುಮಾರು 2,50,000 ರೂ. ಮೌಲ್ಯದ ತೊಗರಿ ಮತ್ತು ಕಡಲೆ ಬೀಜ ಮಾರಾಟ ಮಾಡಿಸಿ ಕೊಡಲಾಯಿತು. ಕೃಷಿಋಷಿ ರೈತ ಉತ್ಪಾದಕ ಕಂಪನಿ ವತಿಯಿಂದ ಟ್ರ್ಯಾಕ್ಟರ್ ಹಾಗೂ ಇನ್ನಿತರ 9 ಬಿಡಿಭಾಗಗಳ ಸರಬರಾಜಿನಿಂದ ಜನವರಿಯಿಂದ ಮಾರ್ಚ್ ತಿಂಗಳವರೆಗೆ 34,5000 ರೂ.ಆದಾಯ ಬಂದಿರುತ್ತದೆ, ಇದರಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತುಂಬಾ ಉಪಯೋಗವಾಗಿದೆ.



## ಬಾಣಾವರ ರೈತ ಉತ್ಪಾದಕ ಕಂಪನಿ ವತಿಯಿಂದ ಅರಿವು ಮೂಡಿಸುವ ಮತ್ತು ಷೇರುಪತ್ರ ವಿತರಣಾ ಕಾರ್ಯಕ್ರಮ

ದಿನಾಂಕ 05.03.2022 ರಂದು ಅಂಜನಾದ್ರಿ ಕನ್ವೆಷನ್ ಹಾಲ್ ನಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ರೈತ ಉತ್ಪಾದಕ ಕಂಪನಿಯ ಸಹಯೋಗದಲ್ಲಿ ಕಂಪನಿಯ ಷೇರುದಾರರು ಹಾಗೂ ಸುತ್ತಮುತ್ತಲಿನ ಎಲ್ಲ ರೈತರಿಗೂ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ICCOA ಕಂಪನಿ ಮತ್ತು ಸ್ಥಳೀಯ ಜನಪ್ರತಿನಿಧಿಗಳ ಸಮ್ಮುಖದಲ್ಲಿ ರೈತರಿಗೆ ಅರಿವು ಮತ್ತು ಷೇರುಪತ್ರ ವಿತರಣಾ ಕಾರ್ಯಕ್ರಮವನ್ನು ಬಾಣಾವರ ರೈತ ಉತ್ಪಾದಕ ಕಂಪನಿ ಲಿಮಿಟೆಡ್ ವತಿಯಿಂದ ಆಯೋಜಿಸಿ ಯಶಸ್ವಿಗೊಳಿಸಲಾಯಿತು. ಬಾಣಾವರ ರೈತ ಉತ್ಪಾದಕ ಸಂಸ್ಥೆ ರೈತಪರ ಕಾರ್ಯಚಟುವಟಿಯಲ್ಲಿ ಪಾಲ್ಗೊಳ್ಳುವುದರಿಂದ ಸುಸ್ಥಿರವಾದ ರೈತ ಆಸಕ್ತ ಗುಂಪುಗಳು ಗ್ರಾಮೀಣ ಭಾಗದಲ್ಲಿ ಹೆಚ್ಚುತ್ತಿವೆ ಎಂದು ಈ ಸಂದರ್ಭದಲ್ಲಿ ಜಿಕೆವಿಕೆಯ ಹಿರಿಯ ವಿಜ್ಞಾನಿ ಡಾ.ಶಿವಶಂಕರ್ ರೈತ ಅರಿವು ಕಾರ್ಯಾಗಾರ ಹಾಗೂ ಷೇರು ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೈತರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿಸಲು ಪ್ರತಿಯೊಬ್ಬರು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ತಜ್ಞರ ಹಾಗೂ ವಿಜ್ಞಾನಿಗಳ ಸಹಕಾರ, ಸಲಹೆಗಳನ್ನು ಪಡೆದು ಯಶಸ್ವಿಯಾಗಿ ರೈತ ಉತ್ಪಾದಕ ಕಂಪನಿಗಳನ್ನು ಕಟ್ಟಿ ಬೆಳಸಿ ಎಂದು ಕರೆ ನೀಡಿದರು.

ರೈತ ಉತ್ಪಾದಕ ಸಂಘದ ಅಧ್ಯಕ್ಷ ಬಿ.ಎನ್. ಜಗದೀಶ್ ಮಾತನಾಡಿ ರೈತರು ಒಂದಾಗಿ ಅಭಿವೃದ್ಧಿ ಹೊಂದುವ ಉದ್ದೇಶದಿಂದಲೇ ರೈತ ಉತ್ಪಾದಕ ಸಂಘ ಆರಂಭವಾಗಿದ್ದು ಹೆಚ್ಚು ರೈತರು ನಮ್ಮೊಂದಿಗೆ ಕೈಜೋಡಿಸಬೇಕು ಎಂದರು. ಕೃಷಿ ಇಲಾಖೆ ಹಾಸನ ಹಾಗೂ ಅರಸೀಕೆರೆ ವತಿಯಿಂದ ಬಾಣಾವರ ರೈತ ಉತ್ಪಾದಕ ಕಂಪನಿ ಎಲ್ಲ ಸದಸ್ಯ ರೈತರಿಗೂ ಮತ್ತು ಹೋಬಳಿಯ ರೈತರ ಉಳುಮೆಗೆ ಸಹಾಯವಾಗುವಂತಹ ಯಂತ್ರಧಾರೆಯನ್ನು ಇಲಾಖೆಯ ವತಿಯಿಂದು ಬಾಣಾವರ ರೈತ ಉತ್ಪಾದಕ ಕಂಪನಿಗೆ ನೀಡಲಾಯಿತು.

ಎಪಿಎಂಸಿ ಅಧ್ಯಕ್ಷರಾದ ನಾಗರಾಜ್ ನಾಯ್ಕ, ನಿರ್ದೇಶಕರಾದ ಶಶಿಧರ ಕಾಚಿಘಟ್ಟ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮೀನಾಕ್ಷಮ್ಮ, ಗ್ರಾಮ ಪಂಚಾಯಿತಿ ಸದಸ್ಯೆ ಸೀಮಾ ಶೈಲಜಾ, ಸಹಾಯಕ ಕೃಷಿ ನಿರ್ದೇಶಕ ಅಶೋಕ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಸತೀಶ, ಐಸಿಸಿಒವಿ ಕಂಪನಿಯ ಭಾನುಪ್ರಕಾಶ್, ಕೃಷಿ ಅಧಿಕಾರಿ ಸೋಮಶೇಖರ್, ಸಹಾಯಕ ತೋಟಗಾರಿಕೆ ಅಧಿಕಾರಿ ವಿನಯ್‌ಕುಮಾರ್, ಕೆನರಾ ಬ್ಯಾಂಕ್ ವ್ಯವಸ್ಥಾಪಕ ಅಶ್ವತ್ ಗಾಣಿಗಾ ಭಾಗವಹಿಸಿದ್ದರು.




ಬಾಣಾವರದಲ್ಲಿ ನಡೆದ ರೈತ ಅರಿವು ಕಾರ್ಯಾಗಾರ ಹಾಗೂ ಷೇರುಪತ್ರ ವಿತರಣೆ ಕಾರ್ಯಕ್ರಮದಲ್ಲಿ ಜಿಕೆವಿಕೆಯ ಹಿರಿಯ ವಿಜ್ಞಾನಿ ಡಾ. ಶಿವಶಂಕರ್ ಮಾತನಾಡಿದರು ರೈತ ಉತ್ಪಾದಕ ಸಂಘದ ಅಧ್ಯಕ್ಷ ಬಿ.ಎಸ್ ಜಗದೀಶ್ ಐಸಿಸಿಒಎ ಕಂಪನಿಯ ಭಾನುಪ್ರಕಾಶ್, ಕೃಷಿ ಅಧಿಕಾರಿ ಸೋಮಶೇಖರ್ ಇದ್ದಾರೆ.

## ಕೃಷ್ಣಾತೀರ ರೈತ ಉತ್ಪಾದಕರ ಕಂಪನಿ ವತಿಯಿಂದ ರೈತರಿಗೆ ಅರಿವು ಮೂಡಿಸುವ ಕಾರ್ಯಕ್ರಮ

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಅಮೃತ ಯೋಜನೆಯಡಿಯಲ್ಲಿ ಸೃಷ್ಟಿಸಲಾದ ಕೃಷ್ಣತೀರ ರೈತರ ಉತ್ಪಾದಕರ ಸಂಸ್ಥೆಗೆ ಶಾಸಕರಾದ ಶರಣಬಸಪ್ಪಗೌಡ ದರ್ಶನಾಪುರವರು ಚಾಲನೆ ನೀಡಿದರು. ಕೃಷಿ ಇಲಾಖೆ ಆಶ್ರಯದಲ್ಲಿ ಹಮ್ಮಿಕೊಂಡ ಈ ಯೋಜನೆಯ ರೂಪರೇಶಗಳನ್ನು ಅರಿತುಕೊಂಡು ನೊಂದಣಿ ಮಾಡಿಕೊಂಡು ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು. ಕೃಷಿ ಸಾಹಾಯಕ ನಿರ್ದೇಶಕರಾದ ಸುನೀಲಕುಮಾರವರು ಮಾತನಾಡಿ ಅಮೃತ ಯೋಜನೆ ಅನ್ವಯ ರೈತ ವರ್ಗಕ್ಕೆ ಅನೂಕೂಲವಾಗಲೆಂದು ಇನ್ನೂ ಸರ್ಕಾರ ಸಂಸ್ಥೆಗಳ ಮುಖಾಂತರ ರೈತರ ಒಗ್ಗೂಡಿಸುವ ಪ್ರಯತ್ನ ಮಾಡಿಕೊಂಡು ಉತ್ತಮ ಫಸಲು ಪಡೆದುಕೊಳ್ಳಲು ಈ ಸಂಸ್ಥೆಯ ವೇದಿಕೆ ಅನೂಕೂಲವಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಅಂಬ್ಲಮ್ಮ ಯಲ್ಲಪ್ಪ ನಾಗನಟಗಿ, ತಾಲ್ಲೂಕಾ ಕೃಷಿ ಅಧಿಕಾರಿ ಡಾ. ರೂಪಾದೇವಿ ನಾಚೇಟಿ ವ್ಯವಸ್ಥಾಪಕರಾದ ಮಹೇಶ, ಗ್ರಾಮ ಸಂಸ್ಥೆ ನಿರ್ದೇಶಕರು ಸೇರಿದಂತೆ ಗಂಗನಾಳ ಗ್ರಾಮದ ರೈತರು ಗಣ್ಯರು ಹಿರಿಯರು ಪಾಲ್ಗೊಂಡಿದ್ದರು.



# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು

ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವು ನಬಾರ್ಡ್ ಪ್ರಾಯೋಜಿತ ರೈತ ಉತ್ಪಾದಕರ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ 12.01.2022 ರಿಂದ 24.03.2022 ರ ಅವಧಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಎರಡು ದಿನದ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಎಲ್ಲ ತರಬೇತಿಗಳಿಗೆ ಒಟ್ಟು ಸುಮಾರು 176 ರೈತ ಉತ್ಪಾದಕರ ಸಂಸ್ಥೆಗಳ 649 ಕ್ಕೂ ಅಧಿಕ ಪದಾಧಿಕಾರಿಗಳು ಭಾಗವಹಿಸಿದ್ದರು. ಈ ತರಬೇತಿಗಳಲ್ಲಿ ಪ್ರಮುಖವಾಗಿ ರೈತ ಉತ್ಪಾದಕ ಸಂಸ್ಥೆಗಳು ಅನುಸರಿಸಬೇಕಾದ ಹಣಕಾಸು ಪದ್ಧತಿಗಳು, ಸಂಸ್ಕರಣೆ ಹಾಗೂ ಮೌಲ್ಯವರ್ಧನೆಗೆ ಇರುವ ಅವಕಾಶಗಳು, ವ್ಯವಹಾರ ಯೋಜನೆಗಳು, ಕಾನೂನಾತ್ಮಕ ಅನುಸರಣೆಗಳು ಮತ್ತು ರೈತ ಉತ್ಪಾದಕ ಸಂಸ್ಥೆಗಳಿಗೆ ಲಭ್ಯವಿರುವ ವಿವಿಧ ಹಣಕಾಸು ಸಹಾಯಗಳ ಬಗ್ಗೆ ತರಬೇತಿ ನೀಡಲಾಯಿತು.

| ಕ್ರ. ಸಂ. | ದಿನಾಂಕ | ಜಿಲ್ಲೆ | ಎಫ್.ಪಿ.ಓ ಸಂಖ್ಯೆ | ಸ್ಥಳ |
|---|---|---|---|---|
| 1 | 12 & 13.01.2022 | ಬಳ್ಳಾರಿ, ಗದಗ, ಕೊಪ್ಪಳ ಮತ್ತು ವಿಜಯನಗರ | 8 | ತೋ.ಮ.ವಿ, ಮುನಿರಾಬಾದ್ |
| 2 | 08 & 09.02.2022 | ಕೊಲಾರ ಮತ್ತು ಚಿಕ್ಕಬಳ್ಳಾಪುರ | 13 | ಕೃ.ವಿ.ವಿ., ಕೋಲಾರ |
| 3 | 11 & 12.02.2022 | ಬೆಂಗಳೂರು ಗ್ರಾಮೀಣ ಮತ್ತು ರಾಮನಗರ | 6 | ಕೃ.ವಿ.ವಿ., ರಾಮನಗರ |
| 4 | 17 & 18.02.2022 | ಚಿತ್ರದುರ್ಗ ಮತ್ತು ದಾವಣಗೆರೆ | 11 | ಜಿ.ಕೃ.ತ.ಕೇ., ಬಬ್ಬೂರ ಫಾರ್ಮ್, ಹಿರಿಯೂರ |
| 5 | 21 & 22.02.2022 | ಉಡುಪಿ ಮತ್ತು ದಕ್ಷಿಣ ಕನ್ನಡ | 8 | ಎಆಯ್‌ಸಿ, ನಿಟ್ಟೆ |
| 6 | 25 & 26.02.2022 | ಬಾಗಲಕೋಟೆ ಮತ್ತು ವಿಜಯಪುರ | 17 | ರೈತ ವಿಕಾಸ ಭವನ ತೋ.ಮ.ವಿ., ಬಾಗಲಕೋಟೆ |
| 7 | 07 & 08.03.2022 | ಬೀದರ್ | 28 | ತೋ.ಮ.ವಿ., ಬೀದರ್ |
| 8 | 09 & 10.03.2022 | ಕಲಬುರಗಿ | 8 | ಕೃ.ವಿ.ವಿ., ಕಲಬುರಗಿ |
| 9 | 11 & 12.03.2022 | ಯಾದಗಿರಿ | 7 | ಕಲಿಕೆ ಕೇಂದ್ರ, ಟಾಟಾ ಸಂಸ್ಥೆ, ಯಾದಗಿರಿ |
| 10 | 11 & 12.03.2022 | ಚಿಕ್ಕಮಗಳೂರು | 13 | ಜಿ.ಕೃ.ತ.ಕೇ., ಲಿಂಗದಹಳ್ಳಿ |
| 11 | 11 & 12.03.2022 | ಮಂಡ್ಯ ಮತ್ತು ಮೈಸೂರು | 12 | ಜಿ.ಕೃ.ತ.ಕೇ., ನಾಗೇನಹಳ್ಳಿ, ಮೈಸೂರು |
| 12 | 14 & 15.03.2022 | ಚಾಮರಾಜನಗರ | 11 | ಮೈರಾಡ್ ವಿಭಾಗ, ಚಾಮರಾಜನಗರ |
| 13 | 16 & 17.03.2022 | ಶಿವಮೊಗ್ಗ | 13 | ಕೃ.ವಿ.ವಿ., ನವಿಲೆ, ಶಿವಮೊಗ್ಗ |
| 14 | 21 & 22.03.2022 | ಬೆಳಗಾವಿ | 14 | ಜಿ.ಕೃ.ತ.ಕೇ., ಅರಭಾವಿ |
| 15 | 23 & 24.03.2022 | ಧಾರವಾಡ | 7 | ಜಿ.ಕೃ.ತ.ಕೇ., ಧಾರವಾಡ |










ಚಿತ್ರ

# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು

ಅದೇ ರೀತಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಡಿಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಪ್ರಾಯೋಜಿತವಾದ ರೈತ ಉತ್ಪಾದಕರ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ದಿನಾಂಕ 07.02.2022 ರಿಂದ 23.03.2022 ರ ಅವಧಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಂದು ದಿನದ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಎಲ್ಲ ತರಬೇತಿಗಳಿಗೆ ಒಟ್ಟು ಸುಮಾರು 62 ರೈತ ಉತ್ಪಾದಕರ ಸಂಸ್ಥೆಗಳ 609 ಕ್ಕೂ ಅಧಿಕ ಪದಾಧಿಕಾರಿಗಳು ಭಾಗವಹಿಸಿದ್ದರು. ಈ ತರಬೇತಿಗಳಲ್ಲಿ ಪ್ರಮುಖವಾಗಿ ರೈತ ಉತ್ಪಾದಕರ ಸಂಸ್ಥೆಗಳ ಆಡಳಿತ ಮತ್ತು ನಿರ್ವಹಣೆ, ಸಿ.ಇ.ಓ ಮತ್ತು ನಿರ್ದೇಶಕರುಗಳ ಜವಾಬ್ದಾರಿಗಳು ಮತ್ತು ಪಾತ್ರಗಳು, ಮೌಲ್ಯವರ್ಧನೆಗೆ ಇರುವ ಅವಕಾಶಗಳು, ವ್ಯವಹಾರ ಯೋಜನೆಗಳು, ಕಾನೂನಾತ್ಮಕ ಅನುಸರಣೆಗಳು, ರೈತ ಉತ್ಪಾದಕರ ಸಂಸ್ಥೆಗಳಿಗೆ ಲಭ್ಯವಿರುವ ವಿವಿಧ ಹಣಕಾಸು ಸಹಾಯಗಳ ಬಗ್ಗೆ ತರಬೇತಿ ನೀಡಲಾಯಿತು.

| ಕ್ರ. ಸಂ. | ದಿನಾಂಕ | ಜಿಲ್ಲೆ | ಎಫ್.ಪಿ.ಓ ಸಂಖ್ಯೆ | ಸ್ಥಳ |
|---|---|---|---|---|
| 1 | 07.02.2020 | ಚಿಕ್ಕಬಳ್ಳಾಪುರ | 5 | ಜಿ.ಕೃ.ತ.ಕೇ., ಕಾಗತಿ, ಚಿಂತಾಮಣಿ |
| 2 | 08.02.2022 | ಕೋಲಾರ | 5 | ತೋ.ಮ.ವಿ, ಕೋಲಾರ |
| 3 | 12.02.2022 | ರಾಮನಗರ | 3 | ಕೃ.ವಿ.ವಿ., ಮಾಗಡಿ, ರಾಮನಗರ |
| 4 | 16.02.2022 | ದಾವಣಗೆರೆ | 3 | ಕೃ.ವಿ.ವಿ., ತರಳಬಾಳು, ದಾವಣಗೆರೆ |
| 5 | 16.02.2022 | ತುಮಕೂರು ಮತ್ತು ಹಾಸನ | 8 | ಕೃ.ವಿ.ವಿ., ಕೊನೇಹಳ್ಳಿ |
| 6 | 24.02.2022 | ಚಿತ್ರದುರ್ಗ ಮತ್ತು ದಾವಣಗೆರೆ | 8 | ಜಿ.ಕೃ.ತ.ಕೇ., ಬಬ್ಬೂರ ಫಾರ್ಮ್, ಹಿರಿಯೂರ |
| 7 | 25.02.2022 | ಬಾಗಲಕೋಟೆ | 5 | ರೈತವಿಕಾಸ ಭವನ, ತೋ.ಮ.ವಿ, ಬಾಗಲಕೋಟೆ |
| 8 | 26.02.2022 | ವಿಜಯಪುರ | 5 | ಕರ್ನಾಟಕ ರಾಜ್ಯ ಅಭಿವೃದ್ಧಿ ಮಂಡಳಿ, ಇಂಡಿ |
| 9 | 03.03.2022 | ಚಾಮರಾಜನಗರ | 5 | ಮೈರಾಡ್, ಕಾಮಗೆರೆ, ಚಾಮರಾಜನಗರ |
| 10 | 09.03.2022 | ಕಲಬುರಗಿ | 5 | ಕೃ.ವಿ.ವಿ., ಕಲಬುರಗಿ |
| 11 | 11.03.2022 | ಯಾದಗಿರಿ | 5 | ಕಲಿಕೆ ಕೇಂದ್ರ, ಟಾಟಾ ಟ್ರಸ್ಟ್, ಯಾದಗಿರಿ |
| 12 | 23.03.2022 | ಧಾರವಾಡ | 5 | ಜಿ.ಕೃ.ತ.ಕೇ., ಧಾರವಾಡ |











ಚಿತ್ರ

# ಜನವರಿ–ಮಾರ್ಚ 2022ರ ವ್ಯಾಪಾರದ ವಹಿವಾಟನಲ್ಲಿ ಮುಂಚೂಣಿಯಲ್ಲಿರುವ 10 ರೈತ ಉತ್ಪಾದಕ ಕಂಪನಿಗಳು

| ಕ್ರ. ಸಂ. | ಎಫ್.ಪಿ.ಒ. ಹೆಸರು | ಸ್ಥಳ | ಪ್ರೋತ್ಸಾಹಿಸುವ ಇಲಾಖೆ | ವ್ಯಾಪಾರ ಚಟುವಟಿಕೆಗಳು | 2022ನೇ ಸಾಲಿನ ತಿಂಗಳುವಾರು ಒಟ್ಟು ವ್ಯಾಪಾರ ವಹಿವಾಟು ಮೌಲ್ಯ (ರೂ.ಲಕ್ಷಗಳಲ್ಲಿ) | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | | ಜನವರಿ | | | | ಫೆಬ್ರವರಿ | | | | ಮಾರ್ಚ | | | | |
| | | | | | ಪರಿಕರಗಳ ವ್ಯಾಪಾರ | ಉತ್ಪನ್ನಗಳ ವ್ಯಾಪಾರ | ಸೇವೆಗಳ ವ್ಯಾಪಾರ | ಒಟ್ಟು (a) | ಪರಿಕರಗಳ ವ್ಯಾಪಾರ | ಉತ್ಪನ್ನಗಳ ವ್ಯಾಪಾರ | ಸೇವೆಗಳ ವ್ಯಾಪಾರ | ಒಟ್ಟು (b) | ಪರಿಕರಗಳ ವ್ಯಾಪಾರ | ಉತ್ಪನ್ನಗಳ ವ್ಯಾಪಾರ | ಸೇವೆಗಳ ವ್ಯಾಪಾರ | ಒಟ್ಟು (c) | (a+b+c) ಒಟ್ಟು |
| 1 | ಅಣ್ಣಿಗೇರಿ ತಾಲೂಕು ರೈ.ಉ.ಕಂ.ನಿ.* | ಅಣ್ಣಿಗೇರಿ | ಜ.ಅ.ಇ | ಕುಸುಬೆಎಣ್ಣೆ, ಮುಸುಕಿನ ಜೋಳ, ಕಡಲೆ ಮತ್ತು ಕೃಷಿ ಉಪಕರಣಗಳ ಮಾರಾಟ | 0.30 | 3.90 | 0.00 | 4.20 | 0.55 | 0.00 | 0.00 | 0.55 | 0.80 | 102.64 | 0.00 | 103.44 | 1,08.18 |
| 2 | ಪಿಂಗಾರ ತೋಟಗಾರಿಕೆ ರೈ.ಉ.ಕಂ.ನಿ.* | ವಿಟ್ಲ | ತೋ.ಇ. | ಸಾವಯವ ಗೊಬ್ಬರ ಮತ್ತು ಅಡಿಕೆ ಮಾರಾಟ | 3.39 | 0.75 | 0.13 | 4.27 | 2.61 | 16.96 | 0.03 | 19.61 | 2.51 | 42.56 | 2.24 | 47.30 | 71.18 |
| 3 | ಆದರ್ಶಚೇತನ ರೈ.ಉ.ಕಂ.ನಿ.* | ಪೆರಮಾಚನಹಳ್ಳಿ | ಜ.ಅ.ಇ | ಪಶು ಆಹಾರ ಮತ್ತು ಕೀಟನಾಶಕಗಳ ಮಾರಾಟ | 7.00 | 0.00 | 0.29 | 7.29 | 6.00 | 0.00 | 0.20 | 6.20 | 6.00 | 0.00 | 0.16 | 6.16 | 19.65 |
| 4 | ಬಾಂದಳಿಕೆ ರೈ.ಉ.ಕಂ.ನಿ.* | ನರಸಾಪುರ | ಜ.ಅ.ಇ | ಮುಸುಕಿನ ಜೋಳದ ಬೀಜ, ಟಾರ್ಪಾಲಿನ್ ಹಾಗೂ ಗೊಬ್ಬರಗಳ ಮಾರಾಟ | 1.82 | 5.50 | 0.09 | 7.40 | 1.04 | 3.96 | 0.10 | 5.10 | 0.00 | 0.00 | 0.08 | 0.08 | 12.58 |
| 5 | ಧರಣಿಸಿರಿ ರೈ.ಉ.ಕಂ.ನಿ.* | ಖಾನಾಪುರ | ಜ.ಅ.ಇ | ಮಲ್ಚಿಂಗ್ ಶೀಟ ಮತ್ತು ಕೀಟನಾಶಕಗಳ ಮಾರಾಟ | 2.46 | 0.13 | 0.00 | 2.58 | 5.45 | 0.13 | 0.00 | 5.58 | 3.57 | 0.15 | 0.00 | 3.72 | 11.88 |
| 6 | ಬಾಣಾವರ ರೈ.ಉ.ಕಂ.ನಿ.* | ಬಾಣಾವರ | ಜ.ಅ.ಇ | ಪಶು ಆಹಾರ ಮತ್ತು ಟಾರ್ಪಾಲಿನ್‌ಗಳ ಮಾರಾಟ | 4.94 | 0.00 | 0.00 | 4.94 | 2.12 | 0.00 | 0.00 | 2.12 | 2.37 | 0.00 | 0.00 | 2.37 | 9.42 |
| 7 | ಭಾಗ್ಯವಿಧಾತಾ ರೈ.ಉ.ಕಂ.ನಿ.* | ಬೀಳಗಿ | ಜ.ಅ.ಇ | ಜೈವಿಕ ಗೊಬ್ಬರ ಮತ್ತು ಅಡಿಕೆ ಮಾರಾಟ | 2.00 | 1.40 | 0.03 | 3.43 | 1.50 | 0.85 | 0.00 | 2.35 | 1.25 | 0.00 | 0.00 | 1.25 | 7.03 |
| 8 | ಅಳದಂಗಡಿ ತೋಟಗಾರಿಕೆ ರೈ.ಉ.ಕಂ.ನಿ.* | ಅಳದಂಗಡಿ | ತೋ.ಇ. | ಕೋಳಿ, ಮೀನು ಅಹಾರ ಮತ್ತು ಜೇನುತುಪ್ಪ ಮಾರಾಟ | 1.50 | 0.60 | 0.25 | 2.35 | 0.70 | 0.57 | 0.40 | 1.67 | 0.70 | 1.99 | 0.25 | 2.94 | 6.96 |
| 9 | ಗಂಡಸಿ ರೈ.ಉ.ಕಂ.ನಿ.* | ಚಿಂದೇನಹಳ್ಳಿ | ಜ.ಅ.ಇ | ಪಿ.ವಿ.ಸಿ ಪೈಪ್ ಮತ್ತು ತೆಂಗಿನಕಾಯಿ ಮಾರಾಟ | 1.89 | 0.09 | 0.00 | 1.98 | 1.55 | 0.12 | 0.00 | 1.67 | 2.67 | 0.00 | 0.00 | 2.67 | 6.32 |
| 10 | ರಾಮತೀರ್ಥ ರೈ.ಉ.ಕಂ.ನಿ.* | ತನಿಗೆರೆ | ಜ.ಅ.ಇ | ಹನಿ ನೀರಾವರಿ, ಪಶು ಆಹಾರ, ಸ್ಪ್ರೇಯರ್, ಪಿ.ವಿ.ಸಿ ಪೈಪ್ ಮತ್ತು ಟಾರ್ಪಾಲಿನ್‌ಗಳ ಮಾರಾಟ | 0.25 | 0.00 | 0.02 | 0.27 | 3.50 | 0.00 | 0.10 | 3.60 | 1.75 | 0.00 | 0.04 | 1.79 | 5.65 |

* ರೈ.ಉ.ಕಂ.ನಿ.– ರೈತ ಉತ್ಪಾದಕ ಕಂಪನಿ ನಿಯಮಿತ

# ರೈತ ಉತ್ಪಾದಕರ ಸಂಸ್ಥೆಗಳು ಅನುಸರಿಸಬೇಕಾದ ಕಾನೂನು ಅನುಸರಣೆಗಳು

| ದಿನಾಂಕ | ಮಾರ್ಚ್ 2022 | ಏಪ್ರಿಲ್ 2022 |
|---|---|---|
| 7 ನೇ | ಫೆಬ್ರುವರಿ ತಿಂಗಳ ಟಿ.ಡಿ.ಎಸ್. ಪಾವತಿಸುವುದು | ಮಾರ್ಚ್ ತಿಂಗಳ ಟಿ.ಡಿ.ಎಸ್. ಪಾವತಿಸುವುದು |
| 10 ನೇ | ಫೆಬ್ರುವರಿ ತಿಂಗಳ ಜಿ.ಎಸ್.ಟಿ.ಆರ್–1 ನ್ನು ಪಾವತಿಸುವುದು | ಮಾರ್ಚ್ ತಿಂಗಳ ಜಿ.ಎಸ್.ಟಿ.ಆರ್–1 ನ್ನು ಪಾವತಿಸುವುದು |
| 14 ನೇ | ಟಿ.ಡಿ.ಎಸ್ ಪ್ರಮಾಣಪತ್ರ (ಫಾರ್ಮ್ 16ಬಿ, 16ಸಿ & 16ಡಿ) [14 ಮಾರ್ಚ್ ಕೊನೆಯ ದಿನವಾಗಿರುತ್ತದೆ] | ಟಿ.ಡಿ.ಎಸ್ ಪ್ರಮಾಣಪತ್ರ (ಫಾರ್ಮ್ 16ಬಿ, 16ಸಿ & 16ಡಿ) [14 ಏಪ್ರಿಲ್ ಕೊನೆಯ ದಿನವಾಗಿರುತ್ತದೆ] |
| 15 ನೇ | ▪ ಪಿ.ಎಫ್ ಠೇವಣಿ ಮಾಡುವುದು (ನಿಮಗೆ ಅನ್ವಯಿಸಿದಲ್ಲಿ ಮಾತ್ರ)<br>▪ ಇ.ಎಸ್.ಆಯ್ ಪಾವತಿಸುವುದು (ನಿಮಗೆ ಅನ್ವಯಿಸಿದಲ್ಲಿ ಮಾತ್ರ)<br>▪ 4ನೇ ತ್ರೈಮಾಸಿಕದ ಮುಂಗಡ ತೆರಿಗೆ ಪಾವತಿಸುವುದು | ▪ ಪಿ.ಎಫ್ ಠೇವಣಿ ಮಾಡುವುದು (ನಿಮಗೆ ಅನ್ವಯಿಸಿದಲ್ಲಿ ಮಾತ್ರ)<br>▪ ಇ.ಎಸ್.ಆಯ್ ಪಾವತಿಸುವುದು (ನಿಮಗೆ ಅನ್ವಯಿಸಿದಲ್ಲಿ ಮಾತ್ರ) |
| 18 ನೇ | | ಪ್ರಸ್ತುತ ಹಣಕಾಸು ವರ್ಷದ 4ನೇ ತ್ರೈಮಾಸಿಕದ (ಜನವರಿಯಿಂದ ಮಾರ್ಚ್‌ವರೆಗೆ) ಜಿ.ಎಸ್.ಟಿ ಸಿಎಮ್‌ಪಿ–08 ಫಾರ್ಮ್ ಫೈಲ್ ಮಾಡುವುದು (ಸ್ವಯಂ ಮೌಲ್ಯಮಾಪನ ತೆರಿಗೆ ಪಾವತಿಸುವುದು) |
| 20 ನೇ | ▪ ಡಿಸೆಂಬರ್ ತಿಂಗಳ ಇನ್‌ವಾಯಿಸ್‌ಗಳಿಗೆ ಜಿ.ಎಸ್.ಟಿ ಪಾವತಿಸುವುದು<br>▪ ಡಿಸೆಂಬರ್ ತಿಂಗಳ ಜಿ.ಎಸ್.ಟಿ.ಆರ್–3ಃ ನ್ನು ಪಾವತಿಸುವುದು<br>▪ ವೃತ್ತಿಪರ ತೆರಿಗೆ ಪಾವತಿಸುವುದು | ▪ ಮಾರ್ಚ್ ತಿಂಗಳ ಇನ್‌ವಾಯಿಸ್‌ಗಳಿಗೆ ಜಿ.ಎಸ್.ಟಿ ಪಾವತಿಸುವುದು<br>▪ ಮಾರ್ಚ್ ತಿಂಗಳ ಜಿ.ಎಸ್.ಟಿ.ಆರ್–3ಃ ನ್ನು ಪಾವತಿಸುವುದು<br>▪ ವೃತ್ತಿಪರ ತೆರಿಗೆ ಪಾವತಿಸುವುದು |
| 22 ನೇ | ಕನಿಷ್ಠ 7 ದಿನಗಳ ಮುಂಚಿತವಾಗಿ ಮಂಡಳಿಯ ಸಭೆಯ ಸೂಚನೆ ಮಾಡುವುದು | |
| 25 ನೇ | | ವಾರ್ಷಿಕ ಇ.ಪಿ.ಎಫ್ ಠೇವಣಿ ಮಾಡುವುದು |
| 30 ನೇ | ▪ ಟಿ.ಡಿ.ಎಸ್. ಫಾರ್ಮ್<br>▪ 4ನೇ ತ್ರೈಮಾಸಿಕದ ಮಂಡಳಿಯ ಸಭೆ ಮಾಡುವುದು<br>▪ ಹಣಕಾಸು ವರ್ಷದ ಖಾತೆಗಳನ್ನು ಪೂರ್ತಿಗೊಳಿಸುವುದು | ▪ 4ನೇ ತ್ರೈಮಾಸಿಕದ ಟಿ.ಡಿ.ಎಸ್. ಪಾವತಿಸುವುದು<br>▪ ಉದ್ಯೋಗದಾತರ ವೃತ್ತಿಪರ ತೆರಿಗೆ ಪಾವತಿಸುವುದು<br>▪ ಎಮ್.ಎಸ್.ಎಮ್.ಈ–1: ಅರ್ಧ ವಾರ್ಷಿಕ ಆದಾಯ ರಿಟರ್ನ್ಸ್ ಫೈಲ್ ಮಾಡುವುದು |
| 31 ನೇ | ▪ ಪ್ರಸ್ತುತ ಹಣಕಾಸು ವರ್ಷದ 3ನೇ ತ್ರೈಮಾಸಿಕದ (ಅಕ್ಟೋಬರ್ ನಿಂದ ಡಿಸೆಂಬರ್ ವರೆಗೆ) ಫಾರ್ಮ್ ಜಿ.ಎಸ್.ಟಿ.ಆರ್–1 ನ್ನು ಫೈಲ್ ಮಾಡುವುದು<br>▪ ಟಿ.ಡಿ.ಎಸ್. ರಿಟರ್ನ್ಸ್ ಫೈಲ್ ಮಾಡುವುದು (3ನೇ ತ್ರೈಮಾಸಿಕ)<br>▪ ಕಂಪನಿ ಕಾಯಿದೆ ಪ್ರಕಾರ ಕಾನೂನು ಅನುಸರಣೆ ಪಾಲಿಸುವುದು | ಹಿಂದಿನ ಆರ್ಥಿಕ ವರ್ಷದ ಲೆಕ್ಕಪರಿಶೋಧನೆಗಾಗಿ ತಯಾರಿ ಮಾಡುವುದು |


## ಸಂಪಾದಕೀಯ ಸಮಿತಿ

**ಪ್ರಕಾಶಕರು**

**ಡಾ. ಅಶೋಕ ಎಸ್. ಆಲೂರ,** ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಮುಖ್ಯ ಸಂಪಾದಕರು**

**ಡಾ.ಜಿ. ಬಸವರಾಜ್,** ಉಪನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಸಂಪಾದಕರು**

**ಡಾ. ಇಟಗಿ ಪ್ರಭಾಕರ,** ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಡಾ. ಶಶಿಭೂಷಣ ಘಟ್ನಟ್ಟಿ,** ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಶ್ರೀ. ಮಂಜುನಾಥ ಎಂ,** ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಡಾ. ಕುಮಾರ ಎಸ್,** ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಸಹ ಸಂಪಾದಕರು**

**ಶ್ರೀ. ಸುಧೀರ್ ಪಿ,** ಜಂಟಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ

**ಶ್ರೀಮತಿ. ರಶ್ಮಿ ಅಲಿಯಾಸ್,** ಉಪನಿರ್ದೇಶಕರು, ಜ.ಅ.ಇ

**ಶ್ರೀ. ತಿಮ್ಮಯ್ಯ ಎ.ಜಿ.** ಉಪನಿರ್ದೇಶಕರು, ಜ.ಅ.ಇ

**ಶ್ರೀ. ಸುರೇಶ್ ಎಫ್.ಎ,** ಮುಖ್ಯ ಪಶುವೈದ್ಯಾಧಿಕಾರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

**ಶ್ರೀಮತಿ. ಕ್ಷಮಾ ಪಾಟೀಲ್,** ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ

**ಶ್ರೀಮತಿ. ಸೀಮಾ,** ಉಪನಿರ್ದೇಶಕರು, ರೇಷ್ಮೆ ಇಲಾಖೆ

**ಶ್ರೀ. ಅನಿಲ್ ಕುಮಾರ್ ರಾವತ್,** ಸಹಾಯಕ ಪ್ರಧಾನ ವ್ಯವಸ್ಥಾಪಕರು, ನಬಾರ್ಡ್



## ವಿಳಾಸ

**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

ತೋಟಗಾರಿಕೆ ಮಹಾವಿದ್ಯಾಲಯ, ತೋ.ವಿ.ವಿ.ಆವರಣ, ಜಿ.ಕೆ.ವಿ.ಕೆ.ಅಂಚೆ, ಬೆಂಗಳೂರು–560065

ದೂರವಾಣಿ: +91–80–29721577; ಮೊಬೈಲ್: 94498 72877

ಮಿಂಚಂಚೆ: coefpo@gmail.com; ವೆಬ್‌ಸೈಟ್: www.coefpo.org